**ಪ್ರಧಾನ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಚಿಂಚೋಳಿ**

**ಸಿ.ಸಿ. ನಂ. 57/2021**

| | | | |
|---|---|---|---|
| **ಹೆಸರು** | **:** | **ರಂಗಣ್ಣ** | **ಚಾ.ಸಾ. 18** |
| **ತಂದೆಯ ಹೆಸರು** | **:** | **ಚಂದ್ರಪ್ಪ** | **ಪ್ರಾ.ಸಾ. 8** |
| **ವಯಸ್ಸು** | **:** | **67 ವರ್ಷ** | **ದಿನಾಂಕಃ 17-07-2026** |
| **ಉದ್ಯೋಗ** | **:** | **ನಿವೃತ್ತ ASI** | |
| **ವಾಸಸ್ಥಳ** | **:** | **ಚಂದಾಪುರ** | |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ**

2014 ರಿಂದ 2020ರವರೆಗೆ ನಾನು ಕುಂಚಾವರಂ ಪೋಲಿಸ ಠಾಣೆಯಲ್ಲಿ SHO ಅಂತ ಕರ್ತವ್ಯ ನಿರ್ವಹಿಸಿದ್ದೇನೆ.

ದಿನಾಂಕ 23-12-2019 ರಂದು ಕೊಂಚಾವರಂ ಆಸ್ಪತ್ರೆಯಿಂದ MLC ಬಂದ ಮೇರೆಗೆ ನಾನು ಆಸ್ಪತ್ರೆಗೆ ಬೇಟಿ ಕೊಟ್ಟು ಚಾಸಾ-1ರವರ ಹೇಳಿಕೆಯನ್ನು ದಾಖಲೆ ಮಾಡಿಕೊಂಡು ಬಂದು, ಸದರಿ ಹೇಳಿಕೆಯ ಸಾರಾಂಶದ ಮೇರೆಗೆ ನಾನು ಠಾಣಾ ಗುನ್ನಾ ಸಂಖ್ಯೆ 53/2019 ನೇದ್ದನ್ನ ದಾಖಲಿಸಿಕೊಂಡಿರುತ್ತೇನೆ.

ಈಗ ಸಾಕ್ಷಿದಾರರಿಗೆ ಸದರಿ ದಾಖಲೆಯ ಮೇಲೆ ಇರುವ ಸಹಿಯನ್ನು ತೋರಿಸಿ, ಸಾಕ್ಷಿದಾರರು ನೋಡಿ ಗುರುತಿಸಿರುತ್ತಾರೆ. ಈಗಾಗಲೇ ದಾಖಲೆಯೂ ನಿಪಿ-1 ಅಂತ ಗುರುತಿಸಲಾಗಿದೆ. ದಾಖಲೆಯ ಮೇಲೆ ಇರುವ ಸಾಕ್ಷಿದಾರರ ಎರಡು ಸಹಿಗಳನ್ನು ನಿಪಿ-1(ಬಿ) ಮತ್ತು (ಸಿ) ಅಂತ ಗುರುತಿಸಲಾಯಿತು. ಪ್ರ.ವ.ವರದಿಯನ್ನು ನಿಪಿ-6 ಅಂತ ಗುರುತಿಸಿ ಸಾಕ್ಷಿದಾರರ ಸಹಿಯನ್ನು ನಿಪಿ-6(ಎ) ಎಂದು ಗುರುತಿಸಲಾಯಿತು. ಸದರಿ ದಾಖಲೆಯನ್ನು ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಗಳಿಗೆ ಕಳುಹಿಸಿಕೊಟ್ಟಿರುತ್ತೇನೆ. ದಿನಾಂಕ 24-12-2019ರಂದು ಬೆಳಗ್ಗೆ 9 ರಿಂದ 10 ಗಂಟೆವರೆಗೆ ಚಾಸಾ-2 ಮತ್ತು 3ರವರ ಸಮಕ್ಷಮ ಸ್ಥಳ ಪಂಚನಾಮೆ ಮಾಡಿರುತ್ತೇನೆ. ಈಗಾಗಲೇ ದಾಖಲೆಯನ್ನು ನಿಪಿ-2 ಅಂತ ಗುರುತಿಸಲಾಗಿದೆ. ಸಾಕ್ಷಿದಾರರ ಸಹಿಯನ್ನು ನಿಪಿ-2(ಸಿ) ಅಂತ ಗುರುತಿಸಲಾಯಿತು. ಅದೇ ದಿನ ಚಾಸಾ-4 ರಿಂದ 14ರವರ ಹೇಳಿಕೆಗಳನ್ನು ಪಡೆದಿದ್ದೇನೆ. ಮಾರನೇ ದಿನ ಮುಂದಿನ ತನಿಖೆಗಾಗಿ ಕಡತವನ್ನು ಚಾಸಾ-19ರವರಿಗೆ ವಹಿಸಿದ್ದೇನೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಕೆ.ವಿ.ಬಿ. ವಕೀಲರಿಂದಃ**

ಆಸ್ಪತ್ರೆಯಲ್ಲಿ ಚಾಸಾ-1ರವರು ಮೌಖಿಕವಾಗಿ ಹೇಳಿದನ್ನು ನನ್ನ ಕೈಬರಹದಲ್ಲಿ ಬರೆದಿದ್ದೆ. ನನ್ನ ಕೈ

ಬರಹದಿಂದ ಬರೆದಿದ್ದ ಪ್ರಥಮ ಹೇಳಿಕೆಯನ್ನು ಅಂತಿಮ ವರದಿಯೊಂದಿಗೆ ಸೇರಿದ್ದೇನೆ. ನಿಪಿ-6ರಲ್ಲಿ ನಾನು ಚಾಸಾ-1ರವರು ಲಿಖಿತ ಹೇಳಿಕೆ ಕೊಟ್ಟಿದ್ದಾರೆ ಎಂದು ನಮೂದಿಸಿರುತ್ತೇನೆ. ನಾನು ಪಂಚನಾಮೆ ಮಾಡಿದ ಸ್ಥಳವು ಯಾರ ಹೆಸರಿನಲ್ಲಿದೆ ಅಂತ ಹೇಳಲು ಬರುವುದಿಲ್ಲ. ಚಾಸಾ-4 ರಿಂದ 14ರವರು ಎಲ್ಲರೂ ಒಂದೇ ಊರಿನವರು ಎಂದರೆ ಸರಿ. ಆರೋಪಿ ಸಾಕ್ಷಿದಾರರ ಊರಿನವರು ಅಲ್ಲ ಎಂದರೆ ಸರಿ. ಆಸ್ಪತ್ರೆಯಿಂದ ಗಾಯದ ಪ್ರಮಾಣ ಪತ್ರವನ್ನು ಚಾಸಾ-19ರವರು ಪಡೆದಿದ್ದಾರೆ. ನನಗೆ ಅದನ್ನು ಸ್ವೀಕರಿಸಿದ ದಿನಾಂಕ ಹೇಳಲು ಬರುವುದಿಲ್ಲ. ದಿನಾಂಕ 24-12-2019ರಂದು ಚಾಸಾ-19ರವರು ಗಾಯದ ಪ್ರಮಾಣ ಪತ್ರವನ್ನು ಸ್ವೀಕರಿಸಿದ್ದಾರೆ ಎಂದರೆ ಸರಿ. ಚಾಸಾ-4 ರಿಂದ 14ರವರ ಹೇಳಿಕೆಗಳನ್ನು ಅವರ ಊರಿನಲ್ಲಿ ಪಡೆದಿದ್ದೇನೆ. ಸಾಕ್ಷಿದಾರರ ಊರಿಗೆ ನಾನು ಮತ್ತು ಠಾಣಾ ಬರಹಗಾರರು ಹೋಗಿದ್ದೇವು. ನಮ್ಮ ಠಾಣೆಯಿಂದ ಸಾಕ್ಷಿದಾರರ ಊರು 14 ಕಿ.ಮೀ. ಇದೆ. ದೂರುದಾರರ ಗಂಡ ರಾಜಕೀಯದವರು ಅಂತ ನನಗೆ ಗೊತ್ತಿರಲಿಲ್ಲ. ನನ್ನ ಪ್ರಕಾರ ತನಿಖೆಯಲ್ಲಿ ಜಗಳ ಯಾಕೆ ಆಗಿತ್ತು ಅಂತ ನನಗೆ ಕಂಡು ಬಂದಿಲ್ಲ. ನಾನು ಪ್ರಕರಣ ದಾಖಲೂ ಮಾಡಿ ಸಾಕ್ಷಿದಾರರ ಹೇಳಿಕೆ ಮಾತ್ರ ಪಡೆದಿದ್ದೇನೆ ಎಂದರೆ ಸರಿ.

**ಮರುವಿಚಾರಣೆಃ ಇಲ್ಲಾ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**ಪ್ರಧಾನ ಪ್ರ.ದ.ನ್ಯಾ.ದಂ. ಚಿಂಚೋಳಿ**